(ಉ) ವಿಷಯ : ದಿದ್ದಗಿ ಗ್ರಾಮದಲ್ಲಿ ಆಲಿಕಲ್ಲು ಮಳೆಯಿಂದ ಬೆಳೆ ಹಾನಿ, ಜಾನುವಾರುಗಳ ಸಾವಿನ ಬಗ್ಗೆ.

ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) : ಮಾನ್ಯ ಅಧ್ಯಕ್ಷರೆ, ದಿನಾಂಕ 9.03.2005 ರಂದು ಸಿಂಧನೂರು ತಾಲ್ಲೂಕಿನ ದಿದ್ದಗಿ ಗ್ರಾಮದಲ್ಲಿ 8 ರಾತ್ರಿ ಸತತವಾಗಿ ಒಂದು ಗಂಟೆಗಳ ಕಾಲ ಸುರಿದ ಆಲಿಕಲ್ಲು ಮಳೆಯಿಂದಾಗಿ ಸುಮಾರು ಒಂದು ಸಾವಿರ ಎಕರೆ ಜಮೀನಿನಲ್ಲಿ ಬೆಳೆದ ಬೆಳೆಗಳಿಗೆ ಹಾನಿಯಾಗಿದೆ. ಇದರ ಜೊತೆಗೆ ಮನೆಗಳು, ಗುಡಿಸಲುಗಳು ಕುಸಿದು ಬಿದ್ದು, ಜಾನುವಾರುಗಳು ಸಾವನ್ನಪ್ಪಿ ಜನರಿಗೆ ಕೂಡ ತುಂಬಾ ತೊಂದರೆ ಆಗಿದೆ. ಹಿಂದೆ ಸಹ ಬೆಳೆ ನಾಶವಾಗಿದ್ದ ಸಂದರ್ಭದಲ್ಲಿ ಈ ಸದನದಲ್ಲಿ ವಿಚಾರ ಪ್ರಸ್ತಾಪ ಮಾಡಿದ್ದಾಗ ಕಾನೂನು ಸಚಿವರು ಉತ್ತರ ಕೊಟ್ಟು ಮುನ್ಸೂಚನಾ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ತಿಳಿಸಿದ್ದರು. ದಯಮಾಡಿ ರೈತರಿಗೆ ಪರಿಹಾರವನ್ನು ಕೊಡತಕ್ಕ ಕೆಲಸ ಆಗಬೇಕು ಮತ್ತು ಮನೆಗಳನ್ನು ಕಳೆದುಕೊಂಡಂತ ಜನರಿಗೆ ಮನೆಗಳನ್ನು ಕಟ್ಟಿಸಿ ಕೊಡುವಂತಹ ಕೆಲಸಗಳು ಆಗಬೇಕೆಂದು ತಮ್ಮ ಮೂಲಕ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಕೆ.ಶ್ರೀನಿವಾಸಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ, ದಿದ್ದಗಿ ತಾಲ್ಲೂಕಿನಲ್ಲಿ ಆದಂತಹ ಘಟನೆ ಬಗ್ಗೆ ನಾನು ಟಿವಿಯಲ್ಲಿ ನೋಡಿದ್ದೇನೆ. ಸಂಬಂಧ ಪಟ್ಟಂತಹ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಅಲ್ಲಿ ಏನೇನು ಲಾಸ್ ಆಗಿದೆ ಎಂಬ ಬಗ್ಗೆ ವರದಿ ಕೊಡಲು ತಿಳಿಸಿದ್ದೇನೆ. ವರದಿ ಬಂದ ಕೂಡಲೇ ಮನೆಗಳು ಬಿದ್ದು ಹೋಗಿದ್ದರೆ ಆಶ್ರಯ, ಅಂಬೇಡ್ಕರ್ ಯೋಜನೆಯಡಿಯಲ್ಲಿ ಮನೆಗಳನ್ನು ಕೊಡುವುದಕ್ಕೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಡುವುದರ ಜೊತೆಗೆ ಬೆಳೆ ನಾಶ ಆಗಿದ್ದರೆ ಯಾವ ತರಹ ಪರಿಹಾರ ಕೊಡಬೇಕು ಎಂಬ ಬಗ್ಗೆ ಸಂಬಂಧಪಟ್ಟ ಅಧಿಕಾರಿಗೆ ನೇರವಾಗಿ ಸೂಚನೆ ನೀಡುತ್ತೇನೆ. ಮಾನ್ಯ ಶಾಸಕರಿಗೂ ಈ ಬಗ್ಗೆ ವಿಚಾರ ತಿಳಿಸುತ್ತೇನೆಂದು ತಮ್ಮ ಮೂಲಕ ತಿಳಿಸಲು ಇಷ್ಟಪಡುತ್ತೇನೆ.

(ಊ) ವಿಷಯ : 'ಮಹಿಳೆಯರ ಮೇಲಿನ ದೌರ್ಜನ್ಯ'

†ಶ್ರೀಮತಿ ಟಿ ಶಕುಂತಲಾ ಶೆಟ್ಟಿ (ಪುತ್ತೂರು) : ಮಾನ್ಯ ಅಧ್ಯಕ್ಷರೆ, ಗೋಹತ್ಯೆಯನ್ನು ವಿರೋಧಿಸಿ ಹಲವಾರು ಸದಸ್ಯರುಗಳು ಮಾತನಾಡಿದ್ದಾರೆ. ಅದಕ್ಕೆ ಹೆಚ್ಚಿನ ಮಹತ್ವವನ್ನು ಸಹ ನೀಡಿದ್ದಾರೆ. ಆದರೆ ಮಹಿಳೆಯರ ಮೇಲೆ ಆಗುತ್ತಿರುವ ದೌರ್ಜನ್ಯ, ಶೋಷಣೆ ನಡೆದಾಗ ಅದಕ್ಕೆ ಮಾತನಾಡುವವರು ಯಾರೂ ಇಲ್ಲವೇ ಎಂದಾಗ ಬೇಸರ ಆಗುತ್ತದೆ. ಮಹಿಳೆಯರ ಮೇಲೆ ದೌರ್ಜನ್ಯ, ಶೋಷಣೆ, ಅತ್ಯಾಚಾರ, ಅನಾಚಾರಗಳು ನಡೆಯುತ್ತಿವೆ. ಇಡೀ ಕರ್ನಾಟಕ ರಾಜ್ಯದಲ್ಲಿ 6617 ಒಂದು ವರ್ಷದಲ್ಲಿ ಅತ್ಯಾಚಾರ ಪ್ರಕರಣಗಳು ದಾಖಲು ಆಗಿದೆ. ಇಡೀ ರಾಷ್ಟ್ರದಲ್ಲಿ ಜನವರಿಯಿಂದ ಸೆಪ್ಟೆಂಬರ್‌ವರೆಗೆ 12,414 ಅತ್ಯಾಚಾರ ಕೇಸುಗಳು ದಾಖಲು ಆಗಿವೆ. ದಾಖಲು ಆಗದೇ ಎಷ್ಟೋ ಕೇಸುಗಳು ಬಾಕಿ ಉಳಿದಿವೆ ಗೊತ್ತಿಲ್ಲ. 14 ಲಕ್ಷ 50 ಸಾವಿರ ಕೇಸುಗಳು ನ್ಯಾಯಾಲಯದಲ್ಲಿ ಮಹಿಳೆಯರ ಬಗ್ಗೆ ಕೇಸುಗಳಿದೆ. ಎಲ್ಲಾ ಕೇಸುಗಳು ದಾಖಲು ಆಗಿವೆಯೇ ವಿನಹ ಒಂದು ಪರ್ಸೆಂಟ್‌ನಷ್ಟು ಸಹ ಯಾರಿಗೂ ಶಿಕ್ಷೆ ಆಗಿದ್ದು ಇಲ್ಲ. ಇತ್ತೀಚೆಗೆ ನಮ್ಮ ಕರ್ನಾಟಕ ರಾಜಧಾನಿ ಬೆಂಗಳೂರಿನಲ್ಲಿ ಆಗಿರುವ ಘಟನೆ ಪೇಪರಿನಲ್ಲಿ ಬಂದಿದೆ. 6ನೇ ಕ್ಲಾಸ್‌ನ ಹುಡುಗಿಯನ್ನು ಗೋಣಿ ಚೀಲದಲ್ಲಿ ತುರುಕಿ ಕೊಲೆ ಮಾಡಲಾಗಿದೆ. ಅದೇ ರೀತಿ ನನ್ನ ಕ್ಷೇತ್ರದಲ್ಲಿ ಮಾರ್ಚ್ 1 ರಂದು ಶಾಲೆ ಬಿಟ್ಟು ಮನೆಗೆ ಹೋಗುತ್ತಿದ್ದ 6ನೇ ತರಗತಿ ವಿದ್ಯಾರ್ಥಿನಿಯನ್ನು ಅತ್ಯಾಚಾರ ಮಾಡಿದ್ದಾನೆ.

† ಈ ಭಾಷಣವು ಮಾನ್ಯ ಸದಸ್ಯರಿಂದ ಪರಿಷ್ಕರಿಸಲ್ಪಟ್ಟಿದೆ.